ಒಂದು ಪರೀಕ್ಷೆಯನ್ನು ನೀಡುತ್ತಿದ್ದೇನೆ. ಇದರಲ್ಲಿ ಯಶಸ್ವಿಯಾದವರಿಗೆ ನನ್ನ ಜಮೀನಿನ ಸಂಪೂರ್ಣ ಜವಾಬ್ದಾರಿಯನ್ನು ಬಿಟ್ಟು ಕೊಡುತ್ತೇನೆ. ನಿಮಗೆ ತಿಳಿದಿರುವಂತೆ ಈ ಬಾರಿಯ ಬೆಳೆಯಿಂದ ನಮಗೆ ಹೆಚ್ಚಿನ ಲಾಭ ಬಂದಿಲ್ಲ. ಜಮೀನಿನಲ್ಲಿ ಇಬ್ಬರಿಗೂ ಅರ್ಧ ಭಾಗ ನೀಡುತ್ತೇನೆ. ನೀವು ನಿಮ್ಮ ನಿಮ್ಮ ಭಾಗದಲ್ಲಿ ಯಾವ ಬೆಳೆಯನ್ನಾದರೂ ಬೆಳೆಯಬಹುದು. ಹೆಚ್ಚಿನ ಲಾಭ ತಂದವರಿಗೆ ಸಂಪೂರ್ಣ ಜಮೀನನ್ನು ಕೊಡುತ್ತೇನೆ. ನಾಳೆಯಿಂದಲೇ ನೀವು ಕೆಲಸ ಪ್ರಾರಂಭಿಸಬಹುದು' ಎಂದರು. ಇದುವರೆಗೂ ಓದು, ಆಟ ಎಂದು ಆರಾಮವಾಗಿದ್ದ ಮಕ್ಕಳಿಗೆ ಈಗ ಹೊಸದೊಂದು ಜವಾಬ್ದಾರಿ ಹೆಗಲೇರಿತ್ತು.

ಯಾವುದೇ ವಿಷಯವನ್ನು ಮನಸ್ಸಿಗೆ ತೆಗೆದುಕೊಂಡು ಅತ್ಯುತ್ತಮವಾಗಿ ಮಾಡಬೇಕೆಂಬ ಹಂಬಲ ರವಿಗೆ. ಅವನು ಕೂಡಲೇ ತಜ್ಞರನ್ನು ಭೇಟಿ ಮಾಡಿ ಯಾವ ಬೆಳೆ ಬೆಳೆದರೆ ಹೆಚ್ಚು ಲಾಭ ಎಂಬುದನ್ನು ತಿಳಿದುಕೊಂಡು ಅದೇ ಬೆಳೆಯನ್ನು ಬೆಳೆದನು. ಶಶಿ ತಂದೆ ಬೆಳೆಯುತ್ತಿದ್ದ ಫಸಲನ್ನೇ ನೆಟ್ಟು ಆರಾಮವಾಗಿ ಓಡಾಡಿಕೊಂಡಿದ್ದನು. ಜಮೀನನ್ನು ಮಕ್ಕಳಿಗೆ ಬಿಟ್ಟು ಕೊಟ್ಟಿದ್ದ ರೈತ ರಾಮಪ್ಪ ಸಂಸಾರ ನಿರ್ವಹಿಸಲು ಮನೆಯ ತಾರಸಿಯ ಮೇಲೆ ಚಿಕ್ಕ ಚಿಕ್ಕ ಪಾಟುಗಳಲ್ಲಿ ತರಕಾರಿ ಗಿಡಗಳನ್ನು, ಹಣ್ಣಿನ ಗಿಡಗಳನ್ನೂ ಹಾಕಿ ನೋಡಿಕೊಳ್ಳುತ್ತಿದ್ದನು. ಅವನ ಅನುಭವ ಹಾಗೂ ಆರೈಕೆಗಳಿಂದ ಪಾಟುಗಳಲ್ಲಿ ಉತ್ತಮವಾದ ಬೆಳೆಬಂದು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿತ್ತು.

ರವಿ ಅತ್ಯಂತ ಕಾಳಜಿ ವಹಿಸಿ ಕಾಲಾನುಕಾಲಕ್ಕೆ ಗೊಬ್ಬರ, ಕೀಟನಾಶಕಗಳ ಸಿಂಪಡನೆ ಮಾಡಿಸಿ ಉತ್ತಮ ಫಲಾಪೇಕ್ಷೆಯಲ್ಲಿದ್ದನು. ಶಶಿ ಕೂಡ ಇವೆಲ್ಲವನ್ನೂ ಮಾಡಿದ್ದರೂ ಹೆಚ್ಚಾಗಿ ತಲೆ ಕೆಡಿಸಿಕೊಳ್ಳದೇ ತನ್ನ ಪಾಡಿಗೆ ತಾನಿದ್ದನು. ರಾಮಪ್ಪ ಆ ವೇಳೆಗೆ ಮೂರು ಬೆಳೆಗಳನ್ನು ತೆಗೆದು ಮಾರಾಟ ಮಾಡಿ ಹೊಸ ಬೀಜಗಳ ಖರೀದಿಗೆ ಮುಂದಾಗಿದ್ದನು. ಮಳೆಗಾಲ ಹತ್ತಿರ ಬರುವುದರಿಂದ ಚಿಕ್ಕ ಗಿಡಗಳಿಗೆ ರಕ್ಷಣೆಯನ್ನು ಒದಗಿಸಲು ವ್ಯವಸ್ಥೆಯನ್ನು ಮಾಡಿಕೊಂಡನು. ರವಿ ಮತ್ತು ಶಶಿ ಇಬ್ಬರೂ ಮಳೆಯ ನಿರೀಕ್ಷೆಯಲ್ಲಿರುವಾಗಲೇ ಆಕಾಶದಲ್ಲಿ ಕಪ್ಪು ಮೋಡಗಳು ಕಾಣಿಸಿಕೊಂಡು ಮಳೆ ಸುರಿಯಲು ಶುರುವಾಯಿತು. ಅಗತ್ಯಕ್ಕಿಂತಲೂ ಹೆಚ್ಚಿನ ಮಳೆ ಸುರಿದುದರಿಂದ ಬಿತ್ತನೆ ಮಾಡಿದ್ದ ಬೀಜಗಳೆಲ್ಲಾ ಕೊಚ್ಚಿಕೊಂಡು ಹೋಗಿ ಇಬ್ಬರ ಬೆಳೆಯೂ ಸರ್ವನಾಶವಾಯಿತು. ರವಿಗೆ ಈ ಘಟನೆಯಿಂದಾಗಿ ಬಹಳ ಬೇಸರವಾಗಿ ತುಂಬಾ ಮನಸ್ಸಿಗೆ ಹಚ್ಚಿಕೊಂಡ. ಅವನಿಗೆ ಸೋಲೆಂಬುದನ್ನು ಅರಗಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಎಲ್ಲರಿಗೂ ಆದದ್ದು ನನಗೂ ಆಯಿತು ಎನ್ನುವಂತೆ ಶಶಿ ಆರಾಮವಾಗಿದ್ದ. ಕೂಡಿಟ್ಟ ಹಾಗೂ ರಾಮಪ್ಪನ ತಾರಸಿಯ ತೋಟಗಾರಿಕೆಯಿಂದ ಅಲ್ಪ ಸ್ವಲ್ಪ ಹಣವಿತ್ತು. ಬುಟ್ಟಿಯಿಂದ ಸ್ವಲ್ಪ ಆದಾಯ ಬಂದಿತ್ತು. ಜೀವನಕ್ಕೆ ತೊಂದರೆ ಆಗಲಿಲ್ಲ. ರಾಮಪ್ಪ ಇಬ್ಬರನ್ನೂ ಹತ್ತಿರ ಕರೆದು ಎಲ್ಲವನ್ನೂ ಕೂಲಂಕುಶವಾಗಿ ವಿಚಾರಿಸಿದ. ದೊಡ್ಡವನು ತೀರಾ ತಲೆಕೆಡಿಸಿಕೊಂಡು ಸೊರಗಿ ಹೋಗಿದ್ದ. ಶಶಿ ಮಾತ್ರ ನಂದೇನೂ ತಪ್ಪಿಲ್ಲ ಎಲ್ಲವೂ ಪ್ರಕೃತಿಯದ್ದೇ ತಪ್ಪು ಎಂದು ನುಡಿದು ಸುಮ್ಮನಾದ. ರಾಮಪ್ಪ ಎಬ್ಬರು ಮಕ್ಕಳನ್ನೂ ಪ್ರತ್ಯೇಕವಾಗಿ ಕರೆದು ಬುದ್ಧಿವಾದ ಹೇಳಿದ. ದೊಡ್ಡ ಮಗ ರವಿಗೆ ಸೋಲುವುದನ್ನು ಚಿಕ್ಕ ಮಗ ಶಶಿಗೆ ಗೆಲ್ಲುವ ಪಾಠವನ್ನು ಕಲಿಸಿದ. ಯಾವುದೇ ಕೆಲಸ ಮಾಡಿದರೂ ಮುಂದಾಲೋಚನೆ ಇರಬೇಕು, ಇಲ್ಲವಾದರೆ ಹೀಗೆ ನಷ್ಟವನ್ನು ಅನುಭವಿಸಬೇಕಾಗುತ್ತದೆ ಎಂದು ತಿಳಿಸಿದ. 'ರವೀ ಸದಾ ಗೆಲುವು ನಮ್ಮದಾಗುವುದಿಲ್ಲ. ಕೆಲವೊಮ್ಮೆ ಪರಿಶ್ರಮ ವಹಿಸಿದರೂ ನಮಗೆ ಜಯಲಕ್ಷ್ಮಿ ಒಲಿಯುವುದಿಲ್ಲ. ಇದರಿಂದ ನಾವು ಕಷ್ಟಗಳನ್ನು ಧೈರ್ಯದಿಂದ ಎದುರಿಸುವುದನ್ನು ಕಲಿಯಬೇಕು...' ಭಗವದ್ಗೀತೆಯಲ್ಲಿ ಕೃಷ್ಣ ಹೇಳಿಲ್ಲವೇ ಸುಖ ದುಃಖೇ ಸಮೇಕೃತ್ವ ಲಾಭಾ ಲಾಭೌ ಜಯಾ ಜಯೌ...' ಅಂತ. ಶಶಿ, ಮನಸ್ಸಿಟ್ಟು ಕೆಲಸ ಮಾಡಿದ ಮೇಲೆ ಯಶಸ್ಸು ನನ್ನದಾಗುತ್ತದೆ ಎಂಬ ಭರವಸೆ ಇರಬೇಕು. ನಾವು ಮನುಷ್ಯರು. ನಮಗೆ ಯೋಚಿಸುವ ಶಕ್ತಿ ಇದೆ. ಅದನ್ನು ಉಪಯೋಗಿಸಬೇಕು. ಇಂತಹ ಚಿಕ್ಕ ವಯಸ್ಸಿನಲ್ಲಿಯೇ ನನಗೂ ಅದಕ್ಕೂ ಸಂಬಂಧವಿಲ್ಲವೆನ್ನುವಂತಿರುವುದು ಸರಿಯಲ್ಲ. ಗೆಲುವಿನಲ್ಲಿರುವ ಸಂತೋಷವನ್ನೂ ಅನುಭವಿಸಬೇಕು. ಸೋಲಿನಲ್ಲಿ ಆತ್ಮಸ್ಥೈರ್ಯವನ್ನು ಹೆಚ್ಚಿಸಿಕೊಳ್ಳಬೇಕು. ಅನುಭವಗಳಿಂದ ಪಾಠವನ್ನು ಕಲಿಯಬೇಕು...'

ತಂದೆ ಹೇಳಿದ ಪಾಠದಿಂದ ಮಕ್ಕಳು ಅನೇಕ ವಿಷಯಗಳನ್ನು ತಿಳಿದುಕೊಂಡರು. ಮಕ್ಕಳೇ ಇದನ್ನು ಸಣ್ಣ ವಿಷಯವೆಂದು ಕಡೆಗಣಿಸಬೇಡಿ. ಪ್ರತಿ ಹಂತದಲ್ಲೂ ನಿಮಗೆ ತಂದೆ ತಾಯಿ, ಗುರುಗಳು, ಪುಸ್ತಕ, ಹಿರಿಯರು, ಪ್ರಕೃತಿಯಿಂದ ಮತ್ತು ಅನೇಕ ಸಾಧನಗಳಿಂದ ಕಲಿಯಲು ಸಿಗುತ್ತದೆ. ಅದನ್ನು ಸದುಪಯೋಗ ಮಾಡಿಕೊಳ್ಳಿ. ■

# ಮಾಯಾ ಬಜಾರ್



ಚಿತ್ರ: ವಿಜಯಕುಮಾರಿ

ಗಲ್ಲಿ ಗಲ್ಲಿಗೂ ಮಾಲ್ ಬಂದಿದೆ
ಮ್ಯಾಜಿಕ್ ಮಾಯಾ ಬಜಾರ್
ಬೇಕಾದ್ದೆಲ್ಲಾ ಅಲ್ಲೇ ಸಿಗುವ
ಎಲ್ಲರ ಬಿಗ್ ಬಜಾರ್

ಬೋಂಡ ಬಜ್ಜಿ ಪಾಪ್ ಕಾರ್ನ್
ಸಿಗುವುದು ಮಾಲಲ್ಲೆ
ಡಬ್ಬದ ಕ್ಯಾಂಡಿ ಪರಾರಿಯಾಗಿದೆ
ಐಸ್ ಕ್ರೀಂ ಪಾರ್ಲರ್ ಇದೆ ಅಲ್ಲೆ
ಬಾಗಿಲು ಮುಚ್ಚಿದ ಗಾಬರಿಯಾಗಿ
ರೊಟ್ಟಿ ಅಂಗಡಿ ಕಿಟ್ಟಪ್ಪ
ಸೊಳ್ಳೆ ಹೊಡೆಯುತ ಕುಳಿತಿದ್ದಾನೆ
ದಿನಸಿ ಅಂಗಡಿ ಸೀನಪ್ಪ

ಕೇಳಿದ್ದೆಲ್ಲಾ ಕೊಡಿಸುವ ಅಪ್ಪ
ಪಿಜ್ಜ ಬರ್ಗರ್ ತಿನ್ನಿಸೊ ಅಮ್ಮ
ಗುಳಿಗೆಯ ನುಂಗಿಸೋ ಡಾಕ್ಟರ್
ಕಾಲ ಕೆಟ್ಟಿದೆ ಕಾಣಪ್ಪ

■ ಶ್ರೀವಲ್ಲಿ ಶೇಷಾದ್ರಿ, ಚಂದಾಪುರ